ಸಿ.ಮಿಸ್.ನಂ.9/2024

ಪಿ ಡಬ್ಲ್ಯೂ: 1

ದಿನಾಂಕ 12-03-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು: ಎದುರುದಾರರ ಪರ ವಕೀಲರಿಂದ:**

ನಾನು, ವಾದಿ ಮತ್ತು 5 ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸ ಇರುತ್ತೇವೆ ಎಂದರೆ ಸರಿ. ವಾದಿಗೆ ಸುಮಾರು 70 ವರ್ಷ ವಯಸ್ಸಾಗಿದೆ. ಆ ಕುರಿತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ವಾದಿಗೆ ವಯಸ್ಸಾಗಿದ್ದು ಕಣ್ಣು ಕಾಣಿಸುವುದಿಲ್ಲ, ಕಿವಿ ಕೇಳಿಸದ ಕಾರಣ ಜಿ.ಪಿ.ಎ ಬರೆದು ಕೊಟ್ಟಿರುತ್ತಾರೆ. ಆ ಕುರಿತು ಜಿ.ಪಿ.ಎ ಯಲ್ಲಿ ಬರೆಸಿರುವುದಿಲ್ಲ. ವಾದಿಯು ಆರೋಗ್ಯವಾಗಿದ್ದು ಒಡಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಆಕೆಯು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ನಿಜಾಂಶ ತಿಳಿಯುತ್ತದೆ ಎಂಬ ಕಾರಣದಿಂದ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**2.** ಓ ಎಸ್ ನಂ.38/2016 ರ ದಾವೆಯನ್ನು 2016 ರಲ್ಲಿ ಹೂಡಿದ್ದು ದಿನಾಂಕ ತಿಂಗಳು ಗೊತ್ತಿಲ್ಲ. ಸದರಿ ಪ್ರಕರಣದ 2 ನೇ ಅರ್ಜಿಯನ್ನು ದಾವಾ ಆಸ್ತಿ ಮಾರಾಟ ಮಾಡಬಾರದು ಎಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಕೇಳಿ ಸಲ್ಲಿಸಲಾಗಿರುತ್ತದೆ. ಸದರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ತಿಂಗಳು ಗೊತ್ತಿಲ್ಲ. ಸದರಿ ಅರ್ಜಿಯ ಮೇಲೆ 2022 ನೇ ಸಾಲಿನಲ್ಲಿ ಆದೇಶವಾಗಿರುತ್ತದೆ. ಸದರಿ ಆದೇಶ ಯಾವ ಕಾರಣಕ್ಕೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಆದೇಶವು ಮೂಲ ದಾವೆ ತೀರ್ಮಾನಗೊಳ್ಳುವವರೆಗೂ ಆಗಿರುತ್ತದೆ. ಸದರಿ ಆದೇಶದ ಬಗ್ಗೆ ನೊಂದಣಾಧಿಕಾರಿಗಳಿಗೆ ಮಾಹಿತಿ ನೀಡಿರುತ್ತೇವೆ. ಸದರಿ ಮಾಹಿತಿಯ ದಿನಾಂಕ ತಿಂಗಳು ನೆನಪಿಲ್ಲ. ಸದರಿ ಆದೇಶದ ಕುರಿತು ಪಹಣಿ ಪತ್ರಿಕೆಯಲ್ಲಿ ನಮೂದಿಸಿರುವುದಿಲ್ಲ. ಆ ಕಾರಣ ಎದುರುದಾರರು ದಾವಾ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**3.** ಖರೀದಿ ಪತ್ರದ ನಂತರ 6 ನೇ ಪ್ರತಿವಾದಿಯ ಹೆಸರಿನಲ್ಲಿ ಕಂದಾಯ ದಾಖಲೆಗಳು ಆಗಿರುತ್ತವೆ ಎಂದರೆ ಸರಿ. ಅಂದಿನಿಂದ ಆತನೇ ಕಬ್ಜಾ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ಆತನು ಬೇರೆಯವರ ಮೂಲಕ ಸದರಿ ಆಸ್ತಿ ವಹಿವಾಟು ಮಾಡಿಕೊಂಡಿರುತ್ತಾನೆ. ನೊಂದಣಾಧಿಕಾರಿಗಳಿಗೆ ಮಾಹಿತಿ ನೀಡಿರುವ ಕುರಿತು 2016 ರಲ್ಲಿ ಹಿಂಬರ ನೀಡಿರುತ್ತಾರೆ. ಆ ಕುರಿತು ಯಾವುದೇ ವರದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಅರ್ಜಿಯ ಆದೇಶದ ಕುರಿತು 1 ರಿಂದ 3 ನೇ ಎದುರುದಾರರಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಆದೇಶದ ಬಗ್ಗೆ ಮಾಹಿತಿ ಇದಿದ್ದರೆ ಖರೀದಿ ಪತ್ರ ಮಾಡಿಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿಯು ಉದ್ದೇಶ ಪೂರ್ವಕವಾಗಿ ಮಾಡಿಕೊಂಡಿರುವುದಾಗಿ ನುಡಿಯುತ್ತಾರೆ. ಎದುರುದಾರರಿಗೆ ಆದೇಶದ ಮಾಹಿತಿ ಇಲ್ಲದ

ಕಾರಣ ಸದರಿ ಆದೇಶ ಉಲ್ಲಂಘನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**4.** ಮೂಲ ದಾವೆಯ 6 ನೇ ಪ್ರತಿವಾದಿ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ವಿಚಾರಿಸಿ ಖರೀದಿಗೆ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಖರೀದಿ ಪೂರ್ವದಲ್ಲಿ ನಾವೇ ಆತನಿಗೆ ದಾವೆಯ ಬಗ್ಗೆ ತಿಳಿಸಿದ್ದರು ಸಹ ಖರೀದಿಸಿರುವುದಾಗಿ ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ಸದ್ಭಾವನಾ ಖರೀದಿದಾರನಾಗಿರುತ್ತಾನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.